# ತೇಪೆ

ಕೆ.ವಿ. ರಾಜಲಕ್ಷ್ಮಿ

ಕಲೆ: ವೆಂಕಟ್ರಮಣ ಭಟ್

'ಶಂಕರಮ್ಮ, ಮಗು ಬಾಣಂತಿಗೆ ನೀರು ಹಾಕೋಕ್ಕೆ, ಅವರನ್ನು ನೋಡಿಕೊಳ್ಳೋಕೆ ಯಾರಾದ್ರೂ ಸಿಕ್ಕಿದ್ರಾ?' ತಿಂಡಿ ತಿನ್ನುತ್ತಾ ಕೇಳಿದೆ.

'ಇಲ್ಲ ಅಣ್ಣ, ಒಂದಿಬ್ಬರು ಕಣ್ಣಿಗೆ ಬಿದ್ದಿದ್ದಾರೆ, ಇನ್ನೂ ಚೆನ್ನಾಗಿ ವಿಚಾರಿಸಿ ನಾಳೆ ಕೆಲಸಕ್ಕೆ ಬರ್ತಾ ನಾನೇ ಕರ್ಕೊಂಡು ಬರ್ತೀನಿ, ಆಮೇಲೆ ನೀವು ಮಾತಾಡಿಕೊಳ್ಳಿ' ಅಡುಗೆ ಶಂಕರಮ್ಮ ನನಗಿಂತ ಒಂದೆರಡು ವರ್ಷಕ್ಕೆ ದೊಡ್ಡವರೇ ಆದರೂ ನನ್ನನ್ನು ಅಣ್ಣ ಎಂದೇ ಸಂಬೋಧಿಸುತ್ತಿದ್ದರು ಗೌರವದಿಂದ.

'.....'

'ತೇಜಮ್ಮ ಬರೋದು ಮುಂದಿನ ವಾರ ತಾನೆ? ಅಷ್ಟರಲ್ಲಿ ವ್ಯವಸ್ಥೆ ಆಗುತ್ತೆ ಬಿಡಿ.'

ಶಂಕರಮ್ಮನ ಮಾತು ಕೇಳಿ ಕೊಂಚ ಧೈರ್ಯ ಬಂದಿತು.

'ರಾತ್ರಿಗೆ ಚಪಾತಿ ಲಟ್ಟಿಸಿ ನಾನೂ ಹೊರಟೆ, ಆಯ್ತು.'

ನಾನು ಕಾರನ್ನು ಹೊರಗೆ ತೆಗೆಯುವುದರೊಳಗೆ ಶಂಕರಮ್ಮ ಗೇಟು ದಾಟಿದ್ದರು.

